**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 649/2019</u>**

**ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಮೂರ್ತಿ | ಚಾಸಾ-17, ಪ್ರಾಸ-8 |
| ತಂದೆಯ ಹೆಸರು ಃ | ಆರ್ ಬಂಗಾರಸ್ವಾಮಿ | |
| ವಯಸ್ಸು ಃ | 65 ವರ್ಷ | |
| ಉದ್ಯೋಗ ಃ | ನಿವೃತ್ತ ಪಿ ಎಸ್ ಐ | |
| ವಾಸ ಃ | ಶಿವಮೊಗ್ಗ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ದಿಃ 04.05.2017 ರಿಂದ 28.01.2018 ರವರೆಗೆ ನಾನು ಬೀರೂರು ಠಾಣೆಯಲ್ಲಿ ಅಪರಾಧ ವಿಭಾಗದಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 05.12.2017 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ-1 ರವರು ನಿಪಿ-1 ರಂತೆ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 190ಃ2017 ರಂತೆ ಪ್ರಕರಣ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ. ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು, ಪ್ರವವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ನಾನು ಮತ್ತು ಸಿಬ್ಬಂದಿಗಳೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಖಾಸಗಿ ವಾಹನದಲ್ಲಿ ತೆರಳಿ ಅಲ್ಲೇ ಸ್ಥಳದಲ್ಲಿ ಹಾಜರಿದ್ದ ಪಂಚಾಯ್ತಿದಾರರಾದ ಚಾಸಾ-2 ಮತ್ತು 3 ರವರಿಗೆ ಮೌಖಿಕವಾಗಿ ಈ ಕೇಸಿನ ವಿವರವನ್ನು ತಿಳಿಸಿ ಪಂಚಾಯ್ತಿದಾರರಾಗಿ ಬರಲು ತಿಳಿಸಿದ ಮೇರೆಗೆ ಅವರು ಒಪ್ಪಿಕೊಂಡು ಮತ್ತು ಚಾಸಾ-1 ರವರು ತೋರಿಸಿದ ಸ್ಥಳವನ್ನು ಸಮಯ 4.00 ರಿಂದ 5.00 ರವರೆಗೆ ನಿಪಿ-2 ರಂತೆ ಸ್ಥಳ ಮಹಜರನ್ನು ಜರುಗಿಸಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಡಿ) ಎಂದು, ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಮತ್ತು ನಿಪಿ-3 ರಂತೆ ಛಾಯಾಚಿತ್ರ ತೆಗೆಸಿರುತ್ತೇನೆ. ಕಡತದ ಮುಂದಿನ ತನಿಖೆಗಾಗಿ ಚಾಸಾ-18 ರವರಿಗೆ ಹಸ್ತಾಂತರಿಸಿರುತ್ತೇನೆ.

ಚಾಸಾ-18 ರವರ ಆದೇಶದಂತೆ ದಿಃ 15.12.2017 ರಂದು ಈ ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡುವಂತೆ ಮೌಖಿಕವಾಗಿ ತಿಳಿಸಿದ ಮೇರೆಗೆ ಅವರ ಆದೇಶದಂತೆ ನಾನು ಮತ್ತು ಠಾಣಾ ಸಿಬ್ಬಂದಿಗಳಾದ ಚಾಸಾ-14 ರಿಂದ 16 ರವರೊಂದಿಗೆ ಠಾಣಾ ಸರಹದ್ದಿನ ಬಳ್ಳಾರಿ ಕ್ಯಾಂಪ್, ಮಾರ್ಗದ ಕ್ಯಾಂಪ್, ಅಶೋಕ ನಗರ, ಭೋವಿ ಕಾಲೋನಿಗಳನ್ನು ಅಡ್ಡಾಡಿ ನಂತರ ಬಿ ಕೋಡಿಹಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಬೆಳಗ್ಗೆ 9.00 ಗಂಟೆಗೆ ರೈಲ್ವೆ ಬ್ರಿಡ್ಜ್ ಅಂಡರ್ ಪಾಸ್ ಕೆಳಕೆ ಕೆಎ-18 ಇಎ-6058 ನಂಬರಿನ

ಡಿಸ್ಕವರಿ ಬೈಕಿನಲ್ಲಿ ಮೂರು ಜನರು ಬರುತ್ತಿದ್ದುದನ್ನು ನಾವುಗಳು ನೋಡಿ ತಡೆದು ನಿಲ್ಲಿಸಿ ಅವರನ್ನು ವಿಚಾರ ಮಾಡಲಾಗಿ ಆ ಮೂರು ಜನರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ನಾನು ಮತ್ತು ಸಿಬ್ಬಂದಿಗಳೊಂದಿಗೆ ಅವರನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ 1. ಛಾಯಾಪತಿ 2. ಎಸ್. ಮಂಜು 3. ಮಲ್ಲಿಕಾರ್ಜುನ ಎಂದು ಹೆಸರು ಮತ್ತು ವಿಳಾಸ ತಿಳಿಸಿರುತ್ತಾರೆ. ಇವರುಗಳನ್ನು ಬೈಕಿನೊಂದಿಗೆ ಮುಂದಿನ ಕ್ರಮದ ಬಗ್ಗೆ ವರದಿಯನ್ನು ತಯಾರಿಸಿ ಚಾಸಾ-18 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಚಾಸಾ-18 ರವರಿಗೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು, ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಂ ಎಸ್ ಬಿ ವಕೀಲರಿಂದಃ</u>

ಚಾಸಾ-2 ಮತ್ತು 3 ರವರಿಗೆ ಲಿಖಿತವಾಗಿ ನೋಟಿಸು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಮೌಖಿಕವಾಗಿ ಹೇಳಿದ್ದನ್ನು ಒಪ್ಪಿದ್ದರಿಂದ ಲಿಖಿತವಾಗಿ ನೀಡಿರುವುದಿಲ್ಲ. ಲಿಖಿತ ನೋಟಿಸು ನೀಡಲು ನನಗೆ ಸಾಕಷ್ಟು ಸಮಯ ಇತ್ತು. ಆರೋಪಿತರು ನಮ್ಮನ್ನು ನೋಡಿ ಓಡಿ ಹೋಗಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿತರನ್ನು ಪತ್ತೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ವರದಿಗೆ ನಾನು ಠಾಣಾ ಅಂಕಿ ಸಂಖ್ಯೆಗಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಘಟನೆಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.